ದಿನಾಂಕ 02-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ ಸ.ಸ.ಅ ರವರಿಂದಃ-**

ಸುಮಾರು 2 ವರ್ಷಗಳ ಹಿಂದೆ ಸಾರ್ವಜನಿಕರು ಮ.2-45 ಕ್ಕೆ ಕರೆ ಮಾಡಿ ನನ್ನ ಮಕ್ಕಳಿಗೆ ಅಪಘಾತದ ಬಗ್ಗೆ ತಿಳಿಸಿದ್ದರು. ನಾನು ಸಿಂಧನೂರು ಸರ್ಕಾರಿ ಆಸ್ಪತ್ರೆಗೆ ಬಂದು ನೋಡಿದಾಗ ಚಾಸಾ-4 & 5 ರವರಿಗೆ ಗಾಯಗಳಾಗಿದ್ದವು. ಅಪಘಾತವು ಹೇಗೆ & ಯಾರ ತಪ್ಪಿನಿಂದಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿದ್ದರು. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ.

ಆರೋಪಿಯನ್ನು & ವಾಹನವನ್ನು ನಾನು ನೋಡಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿ.16-06-2024 ರಂದು ನಾನು ನಮ್ಮ ಮನೆಯಲ್ಲಿದ್ದಾಗ ಚಾಸಾ-6 ರವರು ನನಗೆ ಫೋನ್ ಮಾಡಿ ತಿಳಿಸಿದ್ದೇನೆಂದರೆ, ಸಿಂಧನೂರಿನ ಹತ್ತಿರ ಚಾಸಾ-4 & 5 ರವರು ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದು, ಅವರನ್ನು ಸಿ.ಸ. ಆಸ್ಪತ್ರೆಗೆ ಸೇರಿಸಿರುವುದಾಗಿ ತಿಳಿಸಿದ್ದರು. ನಾನು ಸಿ.ಸ. ಆಸ್ಪತ್ರೆಗೆ ಬಂದು ನೋಡಿದಾಗ ವಿಷಯ ನಿಜವಿತ್ತು. ಅಲ್ಲಿ ಚಾಸಾ-6 ರವರು ಅವರು ಅಪಘಾತವನ್ನು ನೋಡಿದ್ದು, ಆತ ಹೇಳಿದ್ದೇನೆಂದರೆ ದಿ.16-06-2024 ರಂದು ಮ. 3-30 ರ ಸುಮಾರಿಗೆ ತಾನು ಮೋ.ಸೈ. ತೆಗೆದುಕೊಂಡು ತಾವರೆಗೆರಾ ಕಡೆಗೆ ಹೊರಟಿದ್ದಾಗ ಸಿ-ಕು. ರಸ್ತೆಯ 4 ನೇ ಮೈಲಿ ಕ್ಯಾಂಪಿನ ಅತ್ತಂಟಿ ರಾಮಕೃಷ್ಣ ರವರ ಮನೆಯ ಹತ್ತಿರ ಚಾಸಾ-4 & 5 ರವರು ತಮ್ಮ ದ್ವಿಚಕ್ರ ವಾಹನದಲ್ಲಿ ನಿಧಾನವಾಗಿ ಬರುತ್ತಿದ್ದಾಗ, ಆರೋಪಿ ಚಾಲಕನು ತನ್ನ ಕೆ ಎಸ್ ಆರ್ ಟಿ ಸಿ ಬಸ್ ನಂ.ಕೆ ಎ 36/ಎಫ್ 1088 ನ್ನು ಅತೀವೇಗವಾಗಿ ಚಲಾಯಿಸಿಕೊಂಡು ಬಂದು, ಚಾಸಾ-4 & 5 ರವರು ಹೋಗುತ್ತಿದ್ದ ದ್ವಿಚಕ್ರ ವಾಹನ ಸಂ. ಕೆ ಎ 25/ಎಕ್ಸ್ 6341 ಕ್ಕೆ ಟಕ್ಕರ್ ಕೊಟ್ಟು ಅಪಘಾತ ಪಡಿಸಿದ್ದ ಎಂದರೆ ಸರಿಯಲ್ಲ. ಸದರಿ ಘಟನೆಯಿಂದ ಚಾಸಾ-4 & 5 ರವರಿಗೆ ಭಾರಿ ರಕ್ತಗಾಯವಾಗಿದ್ದರಿಂದ ಅವರನ್ನು

ಆಸ್ಪತ್ರೆಗೆ ಸೇರಿಸಿದ್ದೇವೆಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ನಿಪಿ-1 ರಂತೆ ದೂರು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿ ಪರ ವಕೀಲರಿಂದ:-ಇಲ್ಲ.**

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**